**ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ**

**ದಾವಣಗೆರೆ**

ದಿನಾಂಕ: 25.02.2012

**<u>ಹಿನ್ನೆಲೆ:</u>**

ದಾವಣಗೆರೆ ನಗರಕ್ಕೆ ಅನುಕೂಲವಾಗುವಂತೆ, ನಗರ ಉದ್ಯೋಗ ವಿನಿಮಯ ಕೇಂದ್ರವನ್ನು (ದಾವಣಗೆರೆ ಹರಿಹರ ವ್ಯಾಪ್ತಿಗೆ ಒಳಪಟ್ಟು) 1973 ರಲ್ಲಿ ಪ್ರಾರಂಭಿಸಲಾಗಿದ್ದು, ಮುಂದೆ ದಾವಣಗೆರೆ ಜಿಲ್ಲೆಯಾಗಿ ಪರಿವರ್ತನೆಯಾದ ನಂತರ 1998ರಲ್ಲಿ ಅದೇ ನಗರ ಉದ್ಯೋಗ ವಿನಿಮಯ ಕೇಂದ್ರವನ್ನು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರವನ್ನಾಗಿ ಉನ್ನತೀಕರಿಸಲಾಯಿತು.

**<u>ಮುಖ್ಯ ಕಾರ್ಯಚಟುವಟಿಕೆಗಳು :</u>**

ಈ ಕಚೇರಿಯು ಮುಖ್ಯವಾಗಿ ಖಾಲಿಹುದ್ದೆಗಳ ಖಡ್ಡಾಯ ಅಧಿಸೂಚನೆ (ಅಧಿನಿಯಮ) 6 ರ ಅನ್ವಯ ಸಿ.ಎನ್.ವಿ. ಶಾಸನದಡಿಯಲ್ಲಿ ಜಿಲ್ಲೆಯಲ್ಲಿನ ಎಲ್ಲಾ ಸಾರ್ವಜನಿಕ ಹಾಗೂ 10ಕ್ಕಿಂತ ಹೆಚ್ಚು ಉದ್ಯೋಗಿಗಳನ್ನು ಹೊಂದಿರುವ ಖಾಸಗಿ ಆ್ಯಕ್ಟ್ ಹಾಗೂ ನಾನ್ ಆ್ಯಕ್ಟ್ ಸಂಸ್ಥೆಗಳಿಂದ ಹಾಲಿ ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿ ಇರುವ ಹುದ್ದೆಗಳ ಬಗ್ಗೆ ಪ್ರತಿ ತ್ರೈಮಾಸಿಕಾಂತ್ಯದಲ್ಲಿ ಇ.ಆರ್.1 ಹಾಗೂ ಪ್ರತಿ 2 ವರ್ಷಗಳಿಗೊಮ್ಮೆ ಇ.ಆರ್.2 ವರದಿಗಳನ್ನು ಸಂಗ್ರಹಿಸಿ, ಕ್ರೋಢೀಕೃತ ವರದಿಯನ್ನು ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ ಬೆಂಗಳೂರು ಹಾಗೂ ಮಹಾ ನಿರ್ದೇಶನಾಲಯ ನವ ದೆಹಲಿ ಇಲ್ಲಿಗೆ ಕಳುಹಿಸಬೇಕಿರುತ್ತದೆ.

ಹಾಗೆಯೇ, ಉದ್ಯೋಗ ನೆರವನ್ನು ಬಯಸುವವರು ತಮ್ಮ ಹೆಸರುಗಳನ್ನು ಈ ಕಚೇರಿಯಲ್ಲಿ ದಾಖಲಿಸಿದಲ್ಲಿ (ನೋಂದಣಿ ಮಾಡಿಸಿದಲ್ಲಿ), ಈ ಕಚೇರಿಗೆ ನಿಯೋಜಕರುಗಳಿಂದ ಹುದ್ದೆಗಳ ಅಧಿಸೂಚನೆ ಬಂದಾಗ, ಅವರ ಕೋರಿಕೆಯಂತೆ ಹಾಲಿ ಜೀವವಹಿಯಲ್ಲಿರುವ ಅಭ್ಯರ್ಥಿಗಳಲ್ಲಿ ವಿದ್ಯಾರ್ಹತೆ, ಮೀಸಲಾತಿ ಹಾಗೂ ಜೇಷ್ಠತೆಯನುಸಾರ ಅಭ್ಯರ್ಥಿಗಳ ಹೆಸರನ್ನು ಪುರಸ್ಕರಣೆ ಮಾಡಲಾಗುವುದು ಹಾಗೂ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶಗಳ ಬಗ್ಗೆ ಸೂಕ್ತ ಮಾಹಿತಿ ಮಾರ್ಗದರ್ಶನ ನೀಡಲಾಗುತ್ತದೆ.

## ಮುಖ್ಯ ಕಾರ್ಯಚಟುವಟಿಕೆಗಳು :

ಸ್ಟಡಿ ಸರ್ಕಲ್ ಯೋಜನೆಯಲ್ಲಿ ಭಾರತೀಯ ವಾಯುದಳದ ಏರ್‌ಮನ್ ನೇರ ನೇಮಕಾತಿ ಹಾಗೂ ಕೆ.ಪಿ.ಎಸ್.ಸಿ. ಮತ್ತು ಇತರೆ ನೇಮಕಾತಿ ಪ್ರಾಧಿಕಾರಗಳಿಂದ ನಡೆಸಲಾಗುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಅಭ್ಯರ್ಥಿಗಳಿಗೆ ನುರಿತ ಉಪನ್ಯಾಸಕರುಗಳ ಮೂಲಕ ಉಚಿತ ಪೂರ್ವಭಾವಿ ತರಬೇತಿ ಶಿಬಿರಗಳನ್ನು ನಡೆಸಲಾಗುತ್ತಿದೆ.

### 2012ನೇ ಸಾಲಿನಲ್ಲಿ ನಡೆಸಲಾದ ಉಚಿತ ತರಬೇತಿ ಶಿಬಿರಗಳ ವಿವರ :

| ಕ್ರ ಸಂ | ತರಬೇತಿ ಶಿಬಿರದ ವಿಷಯ | ಅವಧಿ | ತರಬೇತಿ ಶಿಬಿರಕ್ಕೆ ಹಾಜರಾದ ಅಭ್ಯರ್ಥಿಗಳ ಸಂಖ್ಯೆ | | |
|---|---|---|---|---|---|
| | | | ಪುರುಷರು | ಮಹಿಳೆಯರು | ಒಟ್ಟು |
| 1 | ಕೆ.ಪಿ.ಎಸ್.ಸಿ. ಯಿಂದ ನಡೆದ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ (ಪಿ.ಡಿ.ಓ.) ಹುದ್ದೆಗಳ ನೇಮಕಾತಿ ಸಂಬಂಧ ನಡೆದ ಸ್ಪರ್ಧಾತ್ಮಕ ಪರೀಕ್ಷೆಗೆ ಪೂರ್ವಭಾವಿ ತರಬೇತಿ ಶಿಬಿರ | 12.09.2011 ರಿಂದ 24.09.2011 | 162 | 38 | 200 |
| 2 | ಕೆ.ಪಿ.ಎಸ್.ಸಿ. ಯಿಂದ ನಡೆದ ಗೆಜೆಟೆಡ್ ಪ್ರೊಬೇಷನರ್ (ಕೆ.ಎ.ಎಸ್.) ಹುದ್ದೆಗಳ ನೇಮಕಾತಿ ಸಂಬಂಧ ನಡೆದ ಸ್ಪರ್ಧಾತ್ಮಕ ಪರೀಕ್ಷೆಗೆ ಪೂರ್ವಭಾವಿ ತರಬೇತಿ ಶಿಬಿರ | 23.01.2012 ರಿಂದ 04.02.2012 | 94 | 48 | 142 |

## ಉದ್ಯೋಗ ಮೇಳ (ಕ್ಯಾಂಪಸ್ ಇಂಟರ್‌ವ್ಯೂ) :

ನಿರುದ್ಯೋಗಿ ಅಭ್ಯರ್ಥಿಗಳ ಅನುಕೂಲಕ್ಕಾಗಿ ಪ್ರತಿಷ್ಠಿತ ಖಾಸಗಿ ಸಂಸ್ಥೆಗಳನ್ನು (ಉದಾ: ಚೆನ್ನೈನ ಟೆಕ್‌ಮಹೀಂದ್ರಾ, ಫಸ್ಟ್‌ಸೋರ್ಸ್, ದಾವಣಗೆರೆ ಜಿ.ವಿ.ಕೆ. ಇ.ಎಂ.ಆರ್.ಐ. 108, ಶಿವಮೊಗ್ಗದ ನವಭಾರತ್ ಫರ್ಟಿಲೈಜರ್ಸ್, ಬೆಂಗಳೂರಿನ ಆರೆಂಜ್ ಟೆಕ್ ಸಲ್ಯೂಷನ್, ಟಿ.ಡಿ. ಪವರ್ ಸಿಸ್ಟಂ ಮುಂತಾದ ಸಂಸ್ಥೆಗಳನ್ನು ಕಚೇರಿಗೆ ಕರೆಯಿಸಿ, ಇಲ್ಲೇ ಸ್ಥಳೀಯವಾಗಿ ಸಂದರ್ಶನವನ್ನು ನಡೆಸಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರಗಳನ್ನು ಸಹ ಸ್ಥಳದಲ್ಲಿಯೇ ವಿತರಿಸಲಾಗಿರುತ್ತದೆ.

**2011-12 ನೇ ಸಾಲಿನಲ್ಲಿ ಕಚೇರಿಯಲ್ಲಿ ನಡೆಸಲಾದ ಉದ್ಯೋಗ ಮೇಳದ ಬಗ್ಗೆ ವಿವರ**

| ಕ್ರ ಸಂ | ನಡೆಸಲಾದ ಉದ್ಯೋಗ ಮೇಳಗಳ ಸಂಖ್ಯೆ | ಹಾಜರಾದ ನಿಯೋಜಕರ ಸಂಖ್ಯೆ | ಸಂದರ್ಶನಕ್ಕೆ ಹಾಜರಾದ ಅಭ್ಯರ್ಥಿಗಳ ಸಂಖ್ಯೆ | ಆಯ್ಕೆಯಾದ ಅಭ್ಯರ್ಥಿಗಳ ಸಂಖ್ಯೆ | ಶಾರ್ಟ್ ಲೀಸ್ಟ್ ಆದ ಅಭ್ಯರ್ಥಿಗಳ ಸಂಖ್ಯೆ |
|---|---|---|---|---|---|
| 1 | 06 | 06 | 652 | 79 | 64 |

ಕೆ.ವಿ.ಟಿ. ಎಸ್.ಡಿ.ಸಿ. ವತಿಯಿಂದ ಹರಿಹರದಲ್ಲಿ ನಡೆಸಲಾದ ಮಿನಿ ಉದ್ಯೋಗ ಮೇಳದ ವಿವರ

| | | | | | |
|---|---|---|---|---|---|
| 1 | 01 | 47 | 1056 | 149 | 271 |

## ನೋಂದಣಿಗೆ ಅಗತ್ಯ ದಾಖಲೆಗಳು:

ಅಭ್ಯರ್ಥಿಯು ದಾವಣಗೆರೆ ಜಿಲ್ಲೆಯವರಾಗಿದ್ದು, ಅವರ ವಿದ್ಯಾರ್ಹತೆ ಸಂಬಂಧಿಸಿದ ದಾಖಲೆಗಳು ಹಾಗೂ 2 ಫೋಟೋಗಳು ಹಾಗೂ ಅಭ್ಯರ್ಥಿಯು ಖುದ್ದಾಗಿ ಬರುವುದು ಕಡ್ಡಾಯವಾಗಿರುತ್ತದೆ.

ಉಳಿದಂತೆ ಲಭ್ಯವಿದ್ದಲ್ಲಿ ಅಥವಾ ಮೀಸಲಾತಿ ಬಯಸಿದಲ್ಲಿ ಸಂಬಂಧಿಸಿದ ಜಾತಿ ಪ್ರಮಾಣ ಪತ್ರ, ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ, ಅಂಗವಿಕಲರಾದಲ್ಲಿ ಅಂಗವಿಕಲರ ಗುರುತಿನ ಚೀಟಿ, ಇತರೆ.

ಕಚೇರಿ ಮೂಲಕ ನಡೆಸುವ ತರಬೇತಿ ಶಿಬಿರ ಹಾಗೂ ಉದ್ಯೋಗ ಮೇಳಗಳಿಗೆ ಅದಕ್ಕೆ ಸಂಬಂಧಿಸಿದ ಅರ್ಹತೆಯಿದ್ದಲ್ಲಿ ಅಗತ್ಯ ದಾಖಲೆಗಳೊಂದಿಗೆ ಭಾಗವಹಿಸಬಹುದು.

ಕಚೇರಿಯ ಯಾವುದೇ ಕಾರ್ಯಗಳಿಗೆ ಶುಲ್ಕವಿರುವುದಿಲ್ಲ, ಎಲ್ಲಾ ಕಾರ್ಯಗಳು ಉಚಿತವಾಗಿರುತ್ತದೆ.

ನೋಂದಣಿಯನ್ನು ಪ್ರತಿ ಮೂರು ವರ್ಷಗಳಿಗೊಮ್ಮೆ ಕಡ್ಡಾಯವಾಗಿ ಉಚಿತವಾಗಿ ನವೀಕರಿಸಿಕೊಳ್ಳಬೇಕಿರುತ್ತದೆ ಹಾಗೂ ನೋಂದಣಿ ನಂತರ ಯಾವುದಾದರೂ ಹೆಚ್ಚಿನ ವ್ಯಾಸಂಗವನ್ನು ಮಾಡಿದ್ದಲ್ಲಿ ಅದನ್ನು ಮತ್ತೆ ಬಂದು ಉಚಿತವಾಗಿ ಸೇರಿಸಬಹುದಾಗಿರುತ್ತದೆ.

## ಮಾರ್ಗದರ್ಶಿ ಯೋಜನೆ ಅನುಷ್ಠಾನ :

ಉದ್ಯೋಗ ಮತ್ತು ತರಬೇತಿ ಇಲಾಖೆ, ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮ ನಿಯಮಿತ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಗಳ ಸಹಯೋಗದೊಂದಿಗೆ **ಮಾರ್ಗದರ್ಶಿ** ಯೋಜನೆಯಡಿಯಲ್ಲಿ ಅಭ್ಯರ್ಥಿಗಳಿಗೆ ಪಿ.ಯು.ಸಿ. ಹಂತದಲ್ಲಿಯೇ ಪಿ.ಯುಸಿ. ನಂತರ ಮುಂದೇನು ಮಾಡಬಹುದು ಹಾಗೂ ಪಿಯುಸಿ ನಂತರ ಇರುವ ಉದ್ಯೋಗಾವಕಾಶಗಳ ಬಗ್ಗೆ ಸೂಕ್ತ ತಿಳುವಳಿಕೆ ಮಾಹಿತಿ ಮಾರ್ಗದರ್ಶನವನ್ನು ಒದಗಿಸುವ ಸಲುವಾಗಿ ದಾವಣಗೆರೆ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿನ 20 ಸರ್ಕಾರಿ

ಪದವಿ ಪೂರ್ವ ಕಾಲೇಜುಗಳಲ್ಲಿ ಉದ್ಯೋಗ ಮಾಗದರ್ಶಿ ಘಟಕಗಳನ್ನು ಪ್ರಾರಂಬಿಸಲಾಗಿದ್ದು, ಅದಕ್ಕೆ ಅದೇ ಕಾಲೇಜಿನ ಒಬ್ಬರು ಉಪನ್ಯಾಸಕರನ್ನು ಘಟಕಾಧಿಕಾರಿಯನ್ನಾಗಿ ನೇಮಿಸಿ, ಅವರಿಗೆ ಸೂಕ್ತ ತರಬೇತಿಯನ್ನು ನೀಡಲಾಗಿರುತ್ತದೆ. ಹಾಗೂ ಸದರಿ ಘಟಕಗಳಿಗೆ ಮೂಲಭೂತ ಪರಿಕರಗಳಾದ ಟೇಬಲ್ಲು, ಕುರ್ಚಿ ಹಾಗೂ ಬುಕ್‌ಕೇಸ್ (ಅಲ್ಮೇರಾ) ಗಳನ್ನು ಮತ್ತು ಸುಮಾರು ೩೦,೦೦೦ ಗಳ ಬೆಲೆಯಷ್ಟರ ಉಪಯುಕ್ತ ಪುಸ್ತಕಗಳನ್ನು ಒದಗಿಸಲಾಗಿರುತ್ತದೆ. ಇದರ ಪ್ರಯೋಜನವನ್ನು ಸ್ಥಳೀಯ ಕಾಲೇಜಿನ ಅಭ್ಯರ್ಥಿಗಳು ಹಾಗೂ ಆಸಕ್ತ ಇತರೆ ಸುತ್ತಮುತ್ತಲಿನವರೂ ಸಹ ಪಡೆಯಬಹುದಾಗಿರುತ್ತದೆ. ಹಾಗೂ ಪ್ರತಿ ವರ್ಷ ಕಚೇರಿ ವತಿಯಿಂದ ಒಂದು ಹಾಗೂ ಘಟಕಾಧಿಕಾರಿಗಳ ನೇತೃತ್ವದಲ್ಲಿ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳ ಮೂಲಕ 5 ಒಟ್ಟು 6 ಮಾರ್ಗದರ್ಶಿ ಕಾರ್ಯಕ್ರಮಗಳನ್ನು ಕೈಗೊಂಡು ಅದರಲ್ಲಿ ಅಭ್ಯರ್ಥಿಗಳಿಗೆ ಸೂಕ್ತ ಮಾಹಿತಿ ಹಾಗೂ ವೃತಿ ಮಾರ್ಗದರ್ಶನವನ್ನು ನೀಡಲಾಗುತ್ತಿದೆ.

**ಪ್ರಸ್ತುತ ದಾವಣಗೆರೆ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗ ಮಾಹಿತಿ ಘಟಕಗಳ ವಿವಿರ**

| ಚನ್ನಗಿರಿ ತಾಲ್ಲೂಕು | ಹೊನ್ನಾಳಿ ತಾಲ್ಲೂಕು | ಜಗಳೂರು ತಾಲ್ಲೂಕು | ಹರಪನಹಳ್ಳಿ ತಾಲ್ಲೂಕು | ದಾವಣಗೆರೆ ತಾಲ್ಲೂಕು | ಹರಿಹರ ತಾಲ್ಲೂಕು |
|---|---|---|---|---|---|
| ಸಂತೇಬೆನ್ನೂರು | ನ್ಯಾಮತಿ | ಬಿಳಚೋಡು | ಹಲುವಾಗಲು | ಕಕ್ಕರಗೊಳ್ಳ | ಭಾನುವಳ್ಳಿ |
| ತ್ಯಾವಣಗಿ | ಜೀನಹಳ್ಳಿ | ಪಲ್ಲಾಗಟ್ಟೆ | ಲಕ್ಷ್ಮೀಪುರ | ಮಾಯಕೊಂಡ | ಹರಿಹರ |
| ನಲ್ಲೂರು | ಸಾಸ್ವೇಹಳ್ಳಿ | ಜಗಳೂರು | ಮಾದಿಹಳ್ಳಿ | -- | -- |
| ಹಿರೇ-ಕೋಗಲೂರು | ಕೂಲಂಬಿ - ಕುಂದೂರು | ಹೊಸಕೆರೆ | ಸಿಂಗ್ರಿಹಳ್ಳಿ | -- | -- |

**<u>ಇತರೆ :-</u>**

ಭಾರತೀಯ ವಾಯುದಳದ ಏರ್‌ಮನ್ ಹುದ್ದೆಗಳು, ಸೇನಾ ನೇರ ನೇಮಕಾತಿ ಇವುಗಳ ನೇಮಕಾತಿ ಸಂದರ್ಭದಲ್ಲಿ ಸ್ಥಳೀಯವಾಗಿ ವ್ಯಾಪಕ ಪ್ರಚಾರ ಕಾರ್ಯವನ್ನು ಕೈಗೊಳ್ಳಲಾಗುವುದು ಹಾಗೂ ಈ ಬಗ್ಗೆ ಅರ್ಹ ಹಾಗೂ ಇಚ್ಚೆಯುಳ್ಳ ಅಭ್ಯರ್ಥಿಗಳಿಗೆ ಸೂಕ್ತ ಮಾಹಿತಿ ಮಾಗದರ್ಶನವನ್ನು ನೀಡಲಾಗುತ್ತಿದೆ.

ಹೆಚ್ಚಿನ ಮಾಹಿತಿಗಾಗಿ ಉದ್ಯೋಗಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿರುತ್ತದೆ ಹಾಗೂ ಕಚೇರಿ ದೂರವಾಣಿ ಸಂ: ೦8192-259446

ಕಚೇರಿಯ ಪೂರ್ಣ ವಿಳಾಸ : ಉದ್ಯೋಗಾಧಿಕಾರಿ
ಜಿಲ್ಲಾ ಕಉದ್ಯೋಗ ವಿನಿಮಯ ಕೇಂದ್ರ
ಮುಸ್ಲಿಂ ಹಾಸ್ಟೆಲ್ ಕಾಂಪ್ಲಕ್ಸ್ ಅಂಬೇಡ್ಕರ್ ಸರ್ಕಲ್ ಹತ್ತಿರ
ಸರ್. ಮಿರ್ಜಾ ಇಸ್ಮಾಯಿಲ್ ರೋಡ್, ಪಿ.ಜೆ. ಬಡಾವಣೆ,
ದಾವಣಗೆರೆ. 577002

**<u>ಕಚೇರಿಯ ಆಡಳಿತಾತ್ಮಕ ನಿಯಂತ್ರಣ ವಿವರ</u>**

ಕರ್ನಾಟಕ ಸರ್ಕಾರ

ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ

ಕಾರ್ಮಿಕ ಇಲಾಖೆ ಕಾರ್ಯದರ್ಶಿಗಳು

ಉದ್ಯೋಗ ಮತ್ತು ತರಬೇತಿ ಇಲಾಖೆ ಆಯುಕ್ತರು

ಜಂಟಿ ನಿರ್ದೇಶಕರು ಉದ್ಯೋಗ ವಿಭಾಗ

ಉದ್ಯೋಗಾಧಿಕಾರಿ – ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ

ಉದ್ಯೋಗಾಧಿಕಾರಿ
ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ
ದಾವಣಗೆರೆ